ಪಿ.ಡಬ್ಲ್ಯೂ.1

**ಸಾಕ್ಷಿಗೆ ದಿನಾಂಕ : 06-05-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ.ಬಿ.ಎಚ್.ಆರ್ ವಕೀಲರಿಂದ ಆರೋಪಿ ಪರವಾಗಿ**

1. ನನ್ನ ಸ್ವಂತ ಊರು ಉತ್ತೂರ. ನಾನು ಈಗ ಹೆಬ್ಬಾಳ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನಾನು ಸೆಕ್ಯೂರಿಟಿ ಗಾರ್ಡ ಆಗಿ ಮುರಾರ್ಜಿ ವಸತಿ ಶಾಲೆ ಹೆಬ್ಬಾಳದಲ್ಲಿ ಕಳೆದ 21 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನಗೆ 47 ವರ್ಷ ವಯಸ್ಸು. ನನಗೆ ತಿಂಗಳಿಗೆ 12 ಸಾವಿರ ಸಂಬಳ ಇದೆ. ನನ್ನ ಹೆಸರಿನಲ್ಲಿ 2 ಏಕರೆ ಜಮೀನು ಉತ್ತೂರ ಗ್ರಾಮದಲ್ಲಿ ಇದೆ. ನನಗೆ ತಿಂಗಳ ವೆಚ್ಚ ತೆಗದು 5 ಸಾವಿರ ರೂಪಾಯಿ ಮೊತ್ತ ಉಳಿತಾಯ ಆಗುತ್ತದೆ.

2. ಆರೋಪಿತ ನನಗೆ ಕಳೆದ 4 ರಿಂದ 5 ವರ್ಷಗಳಿಂದ ಪರಿಚಿತನು. ಆರೋಪಿತನ ಮಗಳು ಮುರಾರ್ಜಿ ವಸತಿ ಶಾಲೆ ಹೆಬ್ಬಾಳದಲ್ಲಿ ಕಲಿತ್ತಿದ್ದರಿಂದ ಆರೋಪಿತನ ಪರಿಚಯ ನನಗೆ ಇದೆ. ಮತ್ತೆ ಯಾವುದಾದರೂ ಶಾಲೆಯ ಪಾಲಕರಿಗೆ ನೀವು ಈ ರೀತಿ ಹಣ ನೀಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ಭಂಟನೂರ ಗ್ರಾಮದವನು. ಆರೋಪಿತನು ಯಾವ ಉದ್ಯೋಗ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ. ಯಾವ ಉದ್ಯೋಗ ಮಾಡುತ್ತಾರೆ ಎಂದು ಗೊತ್ತಿಲ್ಲದೇ ಯಾವ ಕಾರಣಕ್ಕಾಗಿ ನೀವು, ನಿಮ್ಮ ಪ್ರಕಾರ ಹಣ ನೀಡಿದಿರಿ ಎಂದರೆ ಸಾಕ್ಷಿಯು ಶಾಲೆಗೆ ಬಂದು - ಹೋಗಿ ಮಾಡುತ್ತಿದ್ದರಿಂದ ಪರಿಚಯ ಆಧಾರದ ಮೇಲೆ ಹೊಲ ಮನೆ ಅಡಚಣೆ ಸಲುವಾಗಿ ಬೇಕು ಎಂದು ಹೇಳಿದ್ದರಿಂದ ನೀಡಿದೆ ಎಂದು ಸಾಕ್ಷಿ ಹೇಳುತ್ತಾರೆ. ಯಾವ ದಿನಾಂಕದಂದು ನಿಮ್ಮ ಬಳಿ ಆರೋಪಿತ ನಿಮ್ಮ ಪ್ರಕಾರ ಹಣ ಕೇಳಿದ ಎಂದರೆ ದಿನಾಂಕ ನಿಖರವಾಗಿ ನೆನಪಿಲ್ಲ. ಮೇ-2023 ರಲ್ಲಿ ನಾನು ಆರೋಪಿತನಿಗೆ ಹಣ ನೀಡಿರುತ್ತೇನೆ. ಆರೋಪಿತ ನನಗೆ 2 ½ ಲಕ್ಷ ಹಣ ಬೇಕೆಂದು ಕೇಳಿ ಪಡೆದಿದ್ದನು. ಕೇಳಿದ ಪೂರ್ತಿ ಮೊತ್ತವನ್ನು ಆರೋಪಿತನಿಗೆ ನೀಡಿದ್ದೇನೆ. ಸದರಿ ಹಣಕಾಸಿನ ವ್ಯವಹಾರಕ್ಕೆ ಬೇರೆ ಯಾರಾದರೂ ಮಧ್ಯಸ್ತಿಕೆ ವಹಿಸಿದ್ದರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಹಣ ನೀಡಿದ ದಿನ ಭದ್ರತೆಗಾಗಿ ಏನಾದರೂ ಪಡೆದಿರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯಾವ ನಂಬಿಕೆಯ ಮೇಲೆ ಅಷ್ಟು ದೊಡ್ಡ ಮೊತ್ತ ನೀಡಿದಿರಿ ಎಂದರೆ ಪರಿಚಯಸ್ತರಾದ ಕಾರಣ ನೀಡಿದೆ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ನಿಮ್ಮ ಬಳಿ ಕೇವಲ 50 ಸಾವಿರ ರೂಪಾಯಿ ಹಣ ಮಾತ್ರ ಕೇಳಿದ್ದು ಅಷ್ಟೆ ಹಣ ನೀವು ಆರೋಪಿತನಿಗೆ ನೀಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿತ 8 ತಿಂಗಳ ನಂತರ ಸದರಿ ಮೊತ್ತ ಹಿಂದಿರುಗಿಸುತ್ತೇನೆ ಎಂದು ನನಗೆ ತಿಳಿಸಿದ್ದರು.

3. ಆರೋಪಿತನ ಮನೆಗೆ ಹೋಗಿ ಹಣ ಮರುಪಾವತಿ ಮಾಡಲು ನಾನು ಕೇಳಿಕೊಂಡಿದ್ದೆನು. ಆರೋಪಿತ ನಿಮಗೆ ಯಾವ ದಿನಾಂಕದಂದು ಚೆಕ ನೀಡಿದರು ಎಂದು ಹೇಳಬಹುದಾ ಎಂದರೆ ದಿನಾಂಕ ಹೇಳಲು ಬರುವುದಿಲ್ಲ, ಆದರೆ ಹಣ ನೀಡಿದ 8 ತಿಂಗಳ ನಂತರ ನೀಡಿದರು ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ಸಹಿ ಮಾಡದ ಖಾಲಿ ಚೆಕ್ಕನ್ನು ನಿಮಗೆ ನೀಡಿದ್ದು ನೀವು ಅದನ್ನು ದುರುಪಯೋಗಪಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಚೆಕ ಮೇಲಿನ ಸಹಿಯಲ್ಲಿ ವ್ಯತ್ಯಾಸ ಎಂಬ ಷರಾದೊಂದಿಗೆ ಚೆಕ ಹಿಂದಿರುಗಿಸಲಾಗಿದೆ ಎಂದರೆ ಸಾಕ್ಷಿಯು ಉದ್ದೇಶಪೂರ್ವಕವಾಗಿ ಆ ರೀತಿ ಬೇರೆ ಸಹಿ ಮಾಡಿ ನೀಡಿದ್ದಾರೆ ಎಂದು ಹೇಳುತ್ತಾರೆ. ಚೆಕ ಹಿಂದಿರುಗಿ ಬಂದ ನಂತರ ಆರೋಪಿತನನ್ನು ನೀವು ಭೇಟಿ ಆದಿರಾ ಎಂದರೆ ಸಾಕ್ಷಿಯು 2 ರಿಂದ 3 ಬಾರಿ ಭೇಟಿ ಆದೆ ಎಂದು ಹೇಳುತ್ತಾರೆ. ಹಿರಿಯರ ಸಮಕ್ಷಮ ಪ್ರಕರಣ ಸಲ್ಲಿಸಿದ ನಂತರ ಮಾತುಕತೆ ಆಗಿದ್ದು, ನಿಮಗೆ ಆರೋಪಿತ 1 ಲಕ್ಷ 30 ಸಾವಿರ ರೂಪಾಯಿ ಹಣ ನೀಡಿದ್ದಾನೆ ಎಂದರೆ ಸರಿಯಲ್ಲ. ದಿಃ21.10.2024 ರಂದು ನೀವು ನ್ಯಾಯಾಲಯಕ್ಕೆ ಬಂದು 1 ಲಕ್ಷ 30 ಸಾವಿರ ಮುಟ್ಟಿದೆ ಎಂದು ಹೇಳಿದ್ದೀರಿ ಎಂದರೆ ಸರಿಯಲ್ಲ. ಆ ರೀತಿ ನೀವು ನ್ಯಾಯಾಲಯದ ಆದೇಶ ಪುಟಗಳಿಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಆದೇಶ ಪುಟದಲ್ಲಿ ಇರುವ ಸಹಿ ನಿಮ್ಮದೇ ಎಂದರೆ ಹೌದು ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ನಿಮಗೆ ಎಲ್ಲಾ ಮೊತ್ತವನ್ನು ಮರುಪಾವತಿ ಮಾಡಿದ್ದಾನೆ ಎಂದರೆ ಸರಿಯಲ್ಲ. ಆರೋಪಿತ ನಿಮಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತನಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ